ಅ) ನ್ಯಾಷನಲ್ ಕೋಅಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇದರಲ್ಲಿ 1985ರಿಂದ ಇಂದಿನವರೆಗೆ ಯಾವುದೇ ವಿಧವಾದ ಸಾಲವನ್ನು ಮನ್ನಾ ಮಾಡಿರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ

3390 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜುಲೈ 1991ರಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲಾದ ಕನ್ನಡ ಬೆರಳಚ್ಚು ಪ್ರಥಮ ದರ್ಜೆ, ಪ್ರೌಢ ದರ್ಜೆ ಹಾಗೂ ಪ್ರವೀಣ ದರ್ಜೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಎಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ? (ದರ್ಜೆವಾರು ತಿಳಿಸಬೇಕು)

ಇ) ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ ಪ್ರಥಮ ಪತ್ರಿಕೆಯ ಉತ್ತರ ಪತ್ರಿಕೆಗಳನ್ನು ಮನಸೋ ಇಚ್ಛೆ ಮೌಲ್ಯಮಾಪನ ಮಾಡಿರುವುದರಿಂದ, ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ ಪ್ರಥಮ ಪತ್ರಿಕೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಊ) ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸುವ ದೃಷ್ಟಿಯಲ್ಲಿ ಎಲ್ಲಾ ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ ಪ್ರಥಮ ಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡಿಸುವ ಬಗ್ಗೆ ಸರ್ಕಾರ ಇಚ್ಛಿಸುವುದೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ)

1) ಪ್ರಥಮ ದರ್ಜೆ	-12198
2) ಪ್ರೌಢದರ್ಜೆ	-8613
3) ಪ್ರವೀಣ ದರ್ಜೆ	- 49

ಆ)

1) ಪ್ರಥಮ ದರ್ಜೆ	- 7476
2) ಪ್ರೌಢ ದರ್ಜೆ	- 5133
3) ಪ್ರವೀಣ ದರ್ಜೆ	- ಇಲ್ಲ

ಇ) ಇಲ್ಲ

ಈ) 2176

ಊ) ಉದ್ಭವಿಸುವುದಿಲ್ಲ.

Management of Junior College Bethamangala,

3336 - SRI. NARAYANASWAMY (Bethamangala): Will the Minister for Education and Parliamentary Affairs pleased to stage.

a) *Whether an Administrator was appointed for the management of Junior College, Bethamangala?*

b) *If so, when he was appointed?*

c) *The number of times the Administrator visited the above College since his appointment.*

d) *Whether term of the Administrator has expired;*

e) *If so when?*

f) *Whether the Govt. has handed over the Management off the above College to the Committee of Management.*

g) *If not, when it would be handed over to the Committee of Management?*

Shri. M. VEERAPPA MOILY (Minister for Education and Parliamentary Affairs)

a) Yes.

b) On 7-9-1981.

c) He has not visited the institution even once.

d) Yes.

e) Six months from Govt. Order No. RD 10 EST 78 dated 21.8.1981.

f) Not yet.

g) After the election and formation of the Managing Body.

ಕೋಲಾರ ಜಿಲ್ಲೆ ಬಂಗಾರು ಪೇಟೆಯ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಪಿ.ಯು.ಸಿ ಮತ್ತು ಪದವಿ ತರಗತಿಗಳ ವಿದ್ಯಾರ್ಥಿಗಳ ಸಂಖ್ಯೆ

3305 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) *ಕೋಲಾರ ಜಿಲ್ಲೆ ಬಂಗಾರುಪೇಟೆಯ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಕಲ್ಲಿ ಪಿ.ಯು.ಸಿ. ಮತ್ತು ಪದವಿ ತರಗತಿಗಳಲ್ಲಿರುವ ಹಾಲಿ ವಿದ್ಯಾರ್ಥಿಗಳ ಸಂಖ್ಯೆ?*

ಬಿ) *ಮೇಲ್ಕಂಡ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸೇರ್ಪಡೆಯ ಗರಿಷ್ಠ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆಯೇ?*

ಸಿ) *ಮೇಲ್ಕಂಡ ಕಾಲೇಜುಗಳಲ್ಲಿ ಹಾಲಿ ಕೆಲಸ ಮಾಡುತ್ತಿರುವ ಬೋಧಕರ ಸಂಖ್ಯೆ ಮತ್ತು ಖಾಲಿ ಹುದ್ದೆಗಳ ಸಂಖ್ಯೆ:*

ಡಿ) *ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಎ) ಪದವಿ ಪೂರ್ವ ತರಗತಿಗಳು : 654 ವಿದ್ಯಾರ್ಥಿಗಳು

ಪದವಿ ತರಗತಿಗಳು : 159 ವಿದ್ಯಾರ್ಥಿಗಳು